ಸೂ. 93	**27. ಅನ್ನಮ್ಲ್**	ರು. 7

ركوعاتها ٧ — سُورَةُ النَّمْلِ مَكِّيَّةٌ — اٰيَاتُهَا ٩٣

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ತಾ ಸೀನ್. ಇವು ಕುರ್‌ಆನ್ ಮತ್ತು ಸುವ್ಯಕ್ತ ಗ್ರಂಥದ ಸೂಕ್ತಗಳು.[1]

طٰسٓ تِلْكَ اٰيٰتُ الْقُرْاٰنِ وَكِتَابٍ مُّبِيْنٍ ﴿١﴾

2-3. (ಇದು) ಮಾರ್ಗದರ್ಶನ ಮತ್ತು ಸುವಾರ್ತೆಯಾಗಿದೆ- ನಮಾಝನ್ನು ಸಂಸ್ಥಾಪಿಸುವ ಹಾಗೂ ಝಕಾತ್ ಕೊಡುವ ಸತ್ಯವಿಶ್ವಾಸಿಗಳಿಗೆ; ಮತ್ತು ಅವರು ಪರಲೋಕದ ಮೇಲೆ ಸಂಪೂರ್ಣ ವಿಶ್ವಾಸವನ್ನಿರಿಸುವವರಾಗಿರುತ್ತಾರೆ.

هُدًى وَّبُشْرٰى لِلْمُؤْمِنِيْنَ ﴿٢﴾ الَّذِيْنَ يُقِيْمُوْنَ الصَّلٰوةَ وَيُؤْتُوْنَ الزَّكٰوةَ وَهُمْ بِالْاٰخِرَةِ هُمْ يُوْقِنُوْنَ ﴿٣﴾

4. ವಾಸ್ತವದಲ್ಲಿ ನಾವು ಪರಲೋಕದ ಮೇಲೆ ವಿಶ್ವಾಸವಿರಿಸದವರಿಗೆ ಅವರ ದುಷ್ಕೃತ್ಯಗಳನ್ನು ಮನೋಹರವಾಗಿಸಿ ಬಿಟ್ಟಿದ್ದೇವೆ. ಆದುದರಿಂದ ಅವರು ದಾರಿ ತಪ್ಪಿ ಅಲೆದಾಡುತ್ತಾರೆ.

اِنَّ الَّذِيْنَ لَا يُؤْمِنُوْنَ بِالْاٰخِرَةِ زَيَّنَّا لَهُمْ اَعْمَالَهُمْ فَهُمْ يَعْمَهُوْنَ ﴿٤﴾

5. ಇವರಿಗಾಗಿ ಅತ್ಯಂತ ಕೆಟ್ಟ ಯಾತನೆ ಇದೆ ಮತ್ತು ಇವರೇ ಪರಲೋಕದಲ್ಲಿ ಅತ್ಯಧಿಕ ನಷ್ಟಕ್ಕೆ ಒಳಗಾಗುವವರು.

اُولٰٓئِكَ الَّذِيْنَ لَهُمْ سُوْٓءُ الْعَذَابِ وَهُمْ فِى الْاٰخِرَةِ هُمُ الْاَخْسَرُوْنَ ﴿٥﴾

6. (ಪೈಗಂಬರರೇ) ನಿಶ್ಚಯವಾಗಿಯೂ ನೀವು ಈ ಕುರ್‌ಆನನ್ನು ಓರ್ವ ಧೀಮಂತನೂ ಸರ್ವಜ್ಞನೂ ಆಗಿರುವವನ ಕಡೆಯಿಂದ ಪಡೆಯುತ್ತಿರುವಿರಿ.

وَاِنَّكَ لَتُلَقَّى الْقُرْاٰنَ مِنْ لَّدُنْ حَكِيْمٍ عَلِيْمٍ ﴿٦﴾

7. ಮೂಸಾರು ತಮ್ಮ ಮನೆಯವರೊಡನೆ, "ನನಗೆ ಒಂದು ಬೆಂಕಿ ಕಂಡಿದೆ. ನಾನು ಈಗಲೇ ಅಲ್ಲಿಂದೇನಾದರೂ ಸುದ್ದಿ ತರುತ್ತೇನೆ. ಇಲ್ಲವೇ ನೀವು ಚಳಿ ಕಾಯಿಸಿಕೊಳ್ಳುವಂತಾಗಲು ಕೆಂಡವನ್ನಾದರೂ ಹೆಕ್ಕಿ ತರುತ್ತೇನೆ" ಎಂದು ಹೇಳಿದ ಸಂದರ್ಭ(ವನ್ನು ಇವರಿಗೆ ತಿಳಿಸಿರಿ).

اِذْ قَالَ مُوْسٰى لِاَهْلِهٖٓ اِنِّىْٓ اٰنَسْتُ نَارًا ؕ سَاٰتِيْكُمْ مِّنْهَا بِخَبَرٍ اَوْ اٰتِيْكُمْ بِشِهَابٍ قَبَسٍ لَّعَلَّكُمْ تَصْطَلُوْنَ ﴿٧﴾

1. ಅರ್ಥಾತ್- ತನ್ನ ಬೋಧನೆಗಳನ್ನು ಮತ್ತು ತನ್ನ ಆದೇಶ-ನಿರ್ದೇಶಗಳನ್ನು ಅತ್ಯಂತ ಸ್ಪಷ್ಟವಾಗಿ ಸಾರುವ ಗ್ರಂಥದ ಸೂಕ್ತಗಳು.

8. ಅಲ್ಲಿ ತಲಪಿದಾಗ ಹೀಗೆ ಕರೆ ಕೇಳಿಸಿತು, "ಈ ಬೆಂಕಿಯಲ್ಲಿ ಇರುವವನು ಮತ್ತು ಇದರ ಪರಿಸರದಲ್ಲಿರುವವನು ಸುಮಂಗಲನು ಮತ್ತು ಸರ್ವಲೋಕಗಳ ಪಾಲಕ ಪ್ರಭುವಾಗಿರುವ ಅಲ್ಲಾಹನು ಪರಮ ಪಾವನನು.

فَلَمَّا جَآءَهَا نُوْدِيَ اَنْۢ بُوْرِكَ مَنْ
فِي النَّارِ وَمَنْ حَوْلَهَا ؕ وَسُبْحٰنَ
اللّٰهِ رَبِّ الْعٰلَمِيْنَ ۝٨

9. ಮೂಸಾ, ಇದು ನಾನು! ಮಹಾ ಪ್ರಬಲನೂ ಧೀಮಂತನೂ ಆಗಿರುವ ಅಲ್ಲಾಹ್,

يٰمُوْسٰۤى اِنَّهٗۤ اَنَا اللّٰهُ الْعَزِيْزُ الْحَكِيْمُ ۝٩

10. ನಿಮ್ಮ ಲಾಠಿಯನ್ನು ಎಸೆಯಿರಿ." ಲಾಠಿಯು ಹಾವಿನಂತೆ ತೆವಳುತ್ತಿರುವುದನ್ನು ಕಂಡೊಡನೆ ಮೂಸಾ ಬೆನ್ನು ತಿರುಗಿಸಿ ಓಟಕಿತ್ತರು ಮತ್ತು ಹಿಂದೆ ತಿರುಗಿಯೂ ನೋಡಲಿಲ್ಲ. "ಮೂಸಾ, ಹೆದರಬೇಡಿರಿ. ನನ್ನ ಸನ್ನಿಧಿಯಲ್ಲಿ ಸಂದೇಶವಾಹಕರು ಅಂಜುವುದಿಲ್ಲ.

وَاَلْقِ عَصَاكَ ؕ فَلَمَّا رَاٰهَا تَهْتَزُّ كَاَنَّهَا
جَآنٌّ وَّلّٰى مُدْبِرًا وَّلَمْ يُعَقِّبْ ؕ يٰمُوْسٰى
لَا تَخَفْ ۫ اِنِّيْ لَا يَخَافُ لَدَيَّ الْمُرْسَلُوْنَ ۝١٠

11. ಆದರೆ ಅಪರಾಧ ಮಾಡಿದವನ ಹೊರತು. ಇನ್ನು ಅವನು ಕೆಡುಕಿನ ಬಳಿಕ (ತನ್ನ ಕರ್ಮವನ್ನು) ಒಳಿತಾಗಿ ಮಾರ್ಪಡಿಸಿ ಕೊಂಡರೆ ನಾನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತೇನೆ.

اِلَّا مَنْ ظَلَمَ ثُمَّ بَدَّلَ حُسْنًۢا بَعْدَ
سُوْٓءٍ فَاِنِّيْ غَفُوْرٌ رَّحِيْمٌ ۝١١

12. ನಿಮ್ಮ ಕೈಯನ್ನು ನಿಮ್ಮ ಜೇಬಿನಲ್ಲಿ ಹಾಕಿರಿ. ಅದು ಯಾವ ತೊಂದರೆಯೂ ಇಲ್ಲದೆ ಪ್ರಕಾಶಿಸುತ್ತ ಹೊರ ಬರುವುದು. ಇವು ಫಿರ್‌ಔನ್ ಮತ್ತು ಅವನ ಜನಾಂಗದ ಕಡೆಗೆ (ಕೊಂಡು ಹೋಗಲಿಕ್ಕಾಗಿರುವ) ಒಂಭತ್ತು ನಿದರ್ಶನಗಳಲ್ಲಿ (ಎರಡು) ಆಗಿರುತ್ತವೆ. ಅವರು ಮಹಾ ದುಷ್ಕರ್ಮಿಗಳು."

وَاَدْخِلْ يَدَكَ فِيْ جَيْبِكَ تَخْرُجْ
بَيْضَآءَ مِنْ غَيْرِ سُوْٓءٍ ۫ فِيْ تِسْعِ اٰيٰتٍ
اِلٰى فِرْعَوْنَ وَقَوْمِهٖ ؕ اِنَّهُمْ كَانُوْا
قَوْمًا فٰسِقِيْنَ ۝١٢

13. ನಮ್ಮ ಸುವ್ಯಕ್ತ ನಿದರ್ಶನಗಳು ಅವರ ಮುಂದೆ ಬಂದಾಗ ಅವರು- ಇದು ಸ್ಪಷ್ಟ ಜಾದುವೆಂದು ಬಿಟ್ಟರು.

فَلَمَّا جَآءَتْهُمْ اٰيٰتُنَا مُبْصِرَةً قَالُوْا
هٰذَا سِحْرٌ مُّبِيْنٌ ۝١٣

14. ಅವರು ಸಂಪೂರ್ಣ ಅಕ್ರಮ ಹಾಗೂ ಅಹಂಕಾರದ ಮಾರ್ಗದಿಂದ ಆ ನಿದರ್ಶನಗಳನ್ನು ನಿಷೇಧಿಸಿದರು. ವಸ್ತುತಃ ಅವರ ಮನಸ್ಸುಗಳು ಅವನ್ನು ಒಪ್ಪಿಕೊಂಡಿದ್ದುವು. ಆ ಕಿಡಿಗೇಡಿಗಳ ಪರಿಣಾಮವೇನಾಯಿತೆಂಬುದನ್ನು ನೋಡಿಕೊಳ್ಳಿರಿ.

وَجَحَدُوْا بِهَا وَاسْتَيْقَنَتْهَاۤ اَنْفُسُهُمْ
ظُلْمًا وَّعُلُوًّا ؕ فَانْظُرْ كَيْفَ كَانَ
عَاقِبَةُ الْمُفْسِدِيْنَ ۝١٤

15. (ಇನ್ನೊಂದೆಡೆ) ನಾವು ದಾವೂದ್ ಮತ್ತು ಸುಲೈಮಾನ್‌ರಿಗೆ ಜ್ಞಾನವಿತ್ತೆವು. ಅವರು, "ನಮಗೆ ಅನೇಕ ಸತ್ಯವಿಶ್ವಾಸಿ ದಾಸರ ಮೇಲೆ ಶ್ರೇಷ್ಠತೆಯನ್ನು ಪ್ರದಾನ ಮಾಡಿರುವ ಅಲ್ಲಾಹನಿಗೆ ಕೃತಜ್ಞತೆಗಳು" ಎಂದರು.

وَلَقَدْ اٰتَيْنَا دَاوٗدَ وَسُلَيْمٰنَ عِلْمًا ۚ
وَقَالَا الْحَمْدُ لِلّٰهِ الَّذِيْ فَضَّلَنَا
عَلٰى كَثِيْرٍ مِّنْ عِبَادِهِ الْمُؤْمِنِيْنَ ۝١٥

16. ಸುಲೈಮಾನರು ದಾವೂದರ ಉತ್ತರಾಧಿಕಾರಿಯಾದರು ಮತ್ತು ಅವರು, "ಜನರೇ, ನಮಗೆ ಪಕ್ಷಿಗಳ ಮಾತುಗಳನ್ನು ಕಲಿಸಿಕೊಡಲಾಗಿದೆ ಮತ್ತು ನಮಗೆ ಎಲ್ಲ ತರದ ವಸ್ತುಗಳನ್ನು ಕೊಡಲಾಗಿದೆ.[2] ನಿಶ್ಚಯವಾಗಿಯೂ ಇದು(ಅಲ್ಲಾಹನ) ಸುಸ್ಪಷ್ಟ ಅನುಗ್ರಹವಾಗಿದೆ" ಎಂದರು.

وَوَرِثَ سُلَيْمٰنُ دَاوٗدَ وَقَالَ يٰۤاَيُّهَا النَّاسُ عُلِّمْنَا مَنْطِقَ الطَّيْرِ وَاُوْتِيْنَا مِنْ كُلِّ شَيْءٍ ؕ اِنَّ هٰذَا لَهُوَ الْفَضْلُ الْمُبِيْنُ ﴿١٦﴾

17. ಸುಲೈಮಾನರಿಗಾಗಿ ಯಕ್ಷರ, ಮಾನವ ಮತ್ತು ಪಕ್ಷಿಗಳ ಸೇನೆಗಳನ್ನು ಜಮಾಯಿಸಲಾಗಿತ್ತು. ಅವುಗಳನ್ನು ಸಂಪೂರ್ಣ ಶಿಸ್ತಿನೊಂದಿಗೆ ಇಡಲಾಗಿತ್ತು.

وَحُشِرَ لِسُلَيْمٰنَ جُنُوْدُهٗ مِنَ الْجِنِّ وَالْاِنْسِ وَالطَّيْرِ فَهُمْ يُوْزَعُوْنَ ﴿١٧﴾

18. (ಒಮ್ಮೆ ಸುಲೈಮಾನರು ಈ ಸೇನೆಯ ಜೊತೆ ಪ್ರಯಾಣಿಸುತ್ತಾ) ಇವರೆಲ್ಲರೂ ಇರುವೆಗಳ ಕಣಿವೆಗೆ ತಲುಪಿದಾಗ ಒಂದು ಇರುವೆಯು, "ಇರುವೆಗಳೇ ನಿಮ್ಮ ಬಿಲಗಳೊಳಗೆ ನುಗ್ಗಿಕೊಳ್ಳಿರಿ. ಸುಲೈಮಾನರೂ ಅವರ ಸೇನೆಗಳೂ ಅರಿಯದೇ ನಿಮ್ಮನ್ನು ತುಳಿದು ಬಿಡುವಂತಾಗದಿರಲಿ" ಎಂದಿತು.

حَتّٰۤى اِذَاۤ اَتَوْا عَلٰى وَادِ النَّمْلِ ۙ قَالَتْ نَمْلَةٌ يّٰۤاَيُّهَا النَّمْلُ ادْخُلُوْا مَسٰكِنَكُمْ ۚ لَا يَحْطِمَنَّكُمْ سُلَيْمٰنُ وَجُنُوْدُهٗ ۙ وَهُمْ لَا يَشْعُرُوْنَ ﴿١٨﴾

19. ಸುಲೈಮಾನರು ಅದರ ಈ ಮಾತಿಗೆ ಮಂದಹಾಸ ಬೀರಿ, ನಕ್ಕುಬಿಟ್ಟರು ಮತ್ತು ಹೀಗೆಂದರು; "ನನ್ನ ಪ್ರಭೂ, ನೀನು ನನ್ನ ಮೇಲೂ ನನ್ನ ಮಾತಾಪಿತರ ಮೇಲೂ ಮಾಡಿದಂತಹ ಉಪಕಾರಕ್ಕಾಗಿ ನಾನು ಕೃತಜ್ಞತೆ ತೋರಿಸುತ್ತಿರುವಂತೆಯೂ ನೀನು ಮೆಚ್ಚುವಂತಹ ಸತ್ಕರ್ಮವೆಸಗುವಂತೆಯೂ ನನ್ನನ್ನು ನಿಯಂತ್ರಿಸಿಡು.[3] ನಿನ್ನ ಕೃಪೆಯಿಂದ ನನ್ನನ್ನು ನಿನ್ನ ಸಜ್ಜನ ದಾಸರಲ್ಲಿ ಸೇರಿಸು."

فَتَبَسَّمَ ضَاحِكًا مِّنْ قَوْلِهَا وَقَالَ رَبِّ اَوْزِعْنِيْۤ اَنْ اَشْكُرَ نِعْمَتَكَ الَّتِيْۤ اَنْعَمْتَ عَلَيَّ وَعَلٰى وَالِدَيَّ وَاَنْ اَعْمَلَ صَالِحًا تَرْضٰىهُ وَاَدْخِلْنِيْ بِرَحْمَتِكَ فِيْ عِبَادِكَ الصّٰلِحِيْنَ ﴿١٩﴾

20. (ಇನ್ನೊಂದು ಸಂದರ್ಭದಲ್ಲಿ) ಸುಲೈಮಾನರು ಪಕ್ಷಿಗಳ ಪರಿಶೀಲನೆ ನಡೆಸಿದರು ಮತ್ತು ಹೀಗೆಂದರು, "ನನಗೆ ಆ 'ಹುದ್‌ಹುದ್' ಕಾಣುವುದಿಲ್ಲವೇಕೆ? ಅದೆಲ್ಲಾದರೂ ಕಣ್ಮರೆಯಾಗಿದೆಯೇ?

وَتَفَقَّدَ الطَّيْرَ فَقَالَ مَا لِيَ لَاۤ اَرَى الْهُدْهُدَ ۖ اَمْ كَانَ مِنَ الْغَآئِبِيْنَ ﴿٢٠﴾

2. ಅರ್ಥಾತ್- ಅಲ್ಲಾಹನು ದಯಪಾಲಿಸಿರುವ ಸರ್ವಸ್ವವೂ ನಮ್ಮ ಬಳಿ ಇದೆ.

3. ಅರ್ಥಾತ್- ನೀನು ದಯಪಾಲಿಸಿರುವಂತಹ ಯೋಗ್ಯತಾರ್ಹತೆಗಳು ಎಷ್ಟು ಮಹತ್ತಾದುದೆಂದರೆ, ನಾನು ಸ್ವಲ್ಪವಾದರೂ ಅಲಕ್ಷ್ಯನಾಗಿಬಿಟ್ಟರೆ ದಾಸ್ಯದ ಮಿತಿಯಿಂದ ಹೊರ ನಡೆದು ಬಿಡುವ ಮತ್ತು ದುರಹಂಕಾರದ ಮತ್ತಿನಲ್ಲಿ ಎಲ್ಲಿಂದೆಲ್ಲಿಗೋ ತಲಪಿ ಬಿಡುವ ಸಾಧ್ಯತೆ ಇದೆ. ಆದ್ದರಿಂದಲೇ ಓ ಪರಿಪಾಲಕನೇ! ನನ್ನನ್ನು ನಿಯಂತ್ರಣದಲ್ಲಿಡು. ಏಕೆಂದರೆ ನಾನು ಅನುಗ್ರಹಗಳಿಗೆ ಕೃತಘ್ನತೆ ತೋರುವವನಾಗುವ ಬದಲು ಕೃತಜ್ಞತಾ ಭಾವದಲ್ಲಿ ನೆಲೆನಿಲ್ಲುವವನಾಗಬೇಕು.

21. ನಾನು ಅದಕ್ಕೆ ಕಠಿಣ ಶಿಕ್ಷೆ ಕೊಡುವೆನು, ಇಲ್ಲವೇ ಅದನ್ನು ಕೊಯ್ದು ಬಿಡುವೆನು. ಅನ್ಯಥಾ ಅದು ನನ್ನ ಮುಂದೆ ಸಮರ್ಪಕ ವಾದ ಕಾರಣ ಕೊಡಬೇಕಾದೀತು."

لَاُعَذِّبَنَّهٗ عَذَابًا شَدِيْدًا اَوْ لَاَاذْبَحَنَّهٗٓ اَوْ لَيَاْتِيَنِّيْ بِسُلْطٰنٍ مُّبِيْنٍ ٢١

22. ಸ್ವಲ್ಪ ಹೊತ್ತಿನಲ್ಲೇ ಅದು ಬಂದು ಹೀಗೆಂದಿತು; "ನಾನು ತಮಗೆ ತಿಳಿಯದಿರುವಂತಹ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ನಾನು 'ಸಬಾ'ದಿಂದ[4] ಖಾತರಿಯಾದ ಸುದ್ದಿ ತಂದಿದ್ದೇನೆ."

فَمَكَثَ غَيْرَ بَعِيْدٍ فَقَالَ اَحَطْتُّ بِمَا لَمْ تُحِطْ بِهٖ وَجِئْتُكَ مِنْ سَبَاٍ ۢبِنَبَاٍ يَّقِيْنٍ ٢٢

23. "ನಾನು ಅಲ್ಲಿ ಆ ಜನಾಂಗದ ಆಡಳಿತಗಾರಳಾಗಿರುವ ಓರ್ವ ಸ್ತ್ರೀಯನ್ನು ಕಂಡೆನು. ಅವಳಿಗೆ ಸಕಲ ಸಾಧನ ಸಾಮಗ್ರಿಗಳು ಒದಗಿಸಲ್ಪಟ್ಟಿವೆ ಮತ್ತು ಅವಳ ಸಿಂಹಾಸನವು ಅತ್ಯುತ್ಕೃಷ್ಟವಾಗಿದೆ.

اِنِّيْ وَجَدْتُّ امْرَاَةً تَمْلِكُهُمْ وَاُوْتِيَتْ مِنْ كُلِّ شَيْءٍ وَّلَهَا عَرْشٌ عَظِيْمٌ ٢٣

24. ಅವಳೂ ಅವಳ ಜನಾಂಗವೂ ಅಲ್ಲಾಹನ ಬದಲು ಸೂರ್ಯನಿಗೆ ಸಾಷ್ಟಾಂಗ ವೆರಗುವುದನ್ನು ನಾನು ಕಂಡೆನು. ಶೈತಾನನು ಅವರ ಪಾಲಿಗೆ ಅವರ ಕರ್ಮಗಳನ್ನು ಮನೋಹರಗೊಳಿಸಿಬಿಟ್ಟನು[5] ಮತ್ತು ಅವರನ್ನು ನೇರ ಮಾರ್ಗದಿಂದ ತಡೆದು ಬಿಟ್ಟನು. ಆದುದರಿಂದ ಅವರು ಸನ್ಮಾರ್ಗವನ್ನು ಹೊಂದುವುದಿಲ್ಲ-

وَجَدْتُّهَا وَقَوْمَهَا يَسْجُدُوْنَ لِلشَّمْسِ مِنْ دُوْنِ اللّٰهِ وَزَيَّنَ لَهُمُ الشَّيْطٰنُ اَعْمَالَهُمْ فَصَدَّهُمْ عَنِ السَّبِيْلِ فَهُمْ لَا يَهْتَدُوْنَ ٢٤

25. ಈ ಕಾರಣದಿಂದಲೇ ಅವರು ಆಕಾಶಗಳಲ್ಲೂ ಭೂಮಿಯಲ್ಲೂ ಅಡಗಿರುವ ವಸ್ತುಗಳನ್ನು ಹೊರ ತರುವ ಮತ್ತು ನೀವು ಬಚ್ಚಿಡು ವುದನ್ನೂ ವ್ಯಕ್ತಪಡಿಸುವವುಗಳನ್ನೂ ಅರಿತಿರುವ ಅಲ್ಲಾಹನಿಗೆ ಸಾಷ್ಟಾಂಗವೆರಗುವುದಿಲ್ಲ.

اَلَّا يَسْجُدُوْا لِلّٰهِ الَّذِيْ يُخْرِجُ الْخَبْءَ فِي السَّمٰوٰتِ وَالْاَرْضِ وَيَعْلَمُ مَا تُخْفُوْنَ وَمَا تُعْلِنُوْنَ ٢٥

26. ವಿಶ್ವಸಿಂಹಾಸನದ ಒಡೆಯನಾಗಿರುವ ಅಲ್ಲಾಹನ ಹೊರತು ಇನ್ನಾವ ಆರಾಧ್ಯನೂ ಇಲ್ಲ."

اَللّٰهُ لَآ اِلٰهَ اِلَّا هُوَ رَبُّ الْعَرْشِ الْعَظِيْمِ ٢٦ السجدة

السجدة

27. ಆಗ ಸುಲೈಮಾನರು ಹೀಗೆ ಹೇಳಿದರು, "ನೀನು ನಿಜ ಹೇಳಿದೆಯೋ ಅಥವಾ ಸುಳ್ಳಾಡುವವರಲ್ಲಾಗಿರುವಿಯೋ ಎಂದು ಈಗಲೇ ನಾವು ಕಂಡುಕೊಳ್ಳುತ್ತೇವೆ.

قَالَ سَنَنْظُرُ اَصَدَقْتَ اَمْ كُنْتَ مِنَ الْكٰذِبِيْنَ ٢٧

28. ನನ್ನ ಈ ಪತ್ರವನ್ನು ಒಯ್ದು ಅವರ ಮುಂದೆ ಹಾಕಿಬಿಡು. ಅನಂತರ ಸರಿದು ನಿಂತು ಅವರು ಹೇಗೆ ಪ್ರತಿಕ್ರಿಯಿಸುತ್ತಾರೆಂದು ನೋಡು."

اِذْهَبْ بِّكِتٰبِيْ هٰذَا فَاَلْقِهْ اِلَيْهِمْ ثُمَّ تَوَلَّ عَنْهُمْ فَانْظُرْ مَاذَا يَرْجِعُوْنَ ٢٨

4. 'ಸಬಾ' ದಕ್ಷಿಣ ಅರೇಬಿಯಾದ ಪ್ರಸಿದ್ಧ ವ್ಯಾಪಾರಿ ಜನಾಂಗವಾಗಿತ್ತು. ಯಮನ್‌ನ ರಾಜಧಾನಿ ಸನ್‌ಆದಿಂದ 55ಮೈಲಿಗಳ ಅಂತರದಲ್ಲಿರುವ 'ಮಾರಿಬ್' ಅದರ ರಾಜಧಾನಿಯಾಗಿತ್ತು.

5. ಇಲ್ಲಿಂದ ಸೂಕ್ತ 26ರ ತನಕದ ವಿವರಗಳು 'ಹುದ್‌ಹುದ್'ನ ಮಾತಿಗೆ ಸೇರ್ಪಡೆಯಾಗಿದೆ ಎಂದು ವಿವರಣಾ ಶೈಲಿಯಿಂದ ವ್ಯಕ್ತವಾಗುತ್ತದೆ.

29. ರಾಣಿಯು[6] ಹೀಗೆ ಹೇಳಿದಳು- "ಆಸ್ಥಾನದವರೇ, ನನ್ನ ಕಡೆಗೆ ಒಂದು ಮಹತ್ವಪೂರ್ಣ ಪತ್ರವು ಎಸೆಯಲ್ಪಟ್ಟಿದೆ.

قَالَتْ يٰٓاَيُّهَا الْمَلَؤُا اِنِّيْٓ اُلْقِيَ اِلَيَّ
كِتٰبٌ كَرِيْمٌ ﴿٢٩﴾

30. ಅದು ಸುಲೈಮಾನರ ಕಡೆಯಿಂದ ಬಂದಿದೆ ಮತ್ತು ಅದನ್ನು ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವ ಅಲ್ಲಾಹನ ನಾಮದಿಂದ ಆರಂಭಿಸಲಾಗಿದೆ.

اِنَّهٗ مِنْ سُلَيْمٰنَ وَاِنَّهٗ بِسْمِ
اللّٰهِ الرَّحْمٰنِ الرَّحِيْمِ ﴿٣٠﴾

31. ಅದರಲ್ಲಿ, ನನ್ನ ವಿರುದ್ಧ ಬಂಡಾಯವೇಳಬೇಡಿರಿ ಮತ್ತು ಮುಸ್ಲಿಮ್[7] ಆಗಿ ನನ್ನ ಬಳಿ ಹಾಜರಾಗಿರಿ, ಎಂದಿದೆ."

اَلَّا تَعْلُوْا عَلَيَّ وَاْتُوْنِيْ مُسْلِمِيْنَ ﴿٣١﴾

32. (ಪತ್ರವನ್ನು ಓದಿ ಹೇಳಿ) ರಾಣಿಯು, "ಜನಾಂಗದ ಸರದಾರರೇ, ನನ್ನ ಈ ವಿಷಯದ ಬಗ್ಗೆ ನನಗೆ ಸಲಹೆ ಕೊಡಿರಿ. ನಾನು ಯಾವ ವಿಷಯದಲ್ಲೂ ನಿಮ್ಮನ್ನು ಬಿಟ್ಟು ತೀರ್ಮಾನ ಕೈಗೊಳ್ಳುವುದಿಲ್ಲ" ಎಂದು ಹೇಳಿದಳು.

قَالَتْ يٰٓاَيُّهَا الْمَلَؤُا اَفْتُوْنِيْ فِيْٓ اَمْرِيْ
مَا كُنْتُ قَاطِعَةً اَمْرًا حَتّٰى تَشْهَدُوْنِ ﴿٣٢﴾

33. ಆಗ ಅವರು, "ನಾವು ಬಲಶಾಲಿಗಳೂ ರಣಶೂರರೂ ಆಗಿರುತ್ತೇವೆ. ಮುಂದಿನ ತೀರ್ಮಾನ ನಿಮ್ಮ ಕೈಯಲ್ಲಿದೆ. ಏನಪ್ಪಣೆ ಕೊಡಬೇಕೆಂದು ನೀವೇ ನಿರ್ಧರಿಸಿಕೊಳ್ಳಿರಿ" ಎಂದು ಉತ್ತರ ಕೊಟ್ಟರು.

قَالُوْا نَحْنُ اُولُوْا قُوَّةٍ وَّاُولُوْا بَاْسٍ شَدِيْدٍ
وَّالْاَمْرُ اِلَيْكِ فَانْظُرِيْ مَاذَا تَاْمُرِيْنَ ﴿٣٣﴾

34. ಆಗ ರಾಣಿ ಹೇಳಿದಳು, "ಅರಸರು ಒಂದು ನಾಡಿನೊಳಗೆ ನುಗ್ಗಿ ಬಂದಾಗ ಅದನ್ನು ಹಾಳುಗೆಡಹುತ್ತಾರೆ ಮತ್ತು ಅದರಲ್ಲಿರುವ ಮರ್ಯಾದಸ್ಥರನ್ನು ಅವಮಾನಗೊಳಿಸುತ್ತಾರೆ. ಅವರು ಹೀಗೆಯೇ ಮಾಡುತ್ತಾರೆ,

قَالَتْ اِنَّ الْمُلُوْكَ اِذَا دَخَلُوْا قَرْيَةً
اَفْسَدُوْهَا وَجَعَلُوْٓا اَعِزَّةَ اَهْلِهَآ اَذِلَّةً
وَكَذٰلِكَ يَفْعَلُوْنَ ﴿٣٤﴾

35. ನಾನು ಅವರಿಗೆ ಒಂದು ಉಡುಗೊರೆಯನ್ನು ಕಳುಹಿಸುತ್ತೇನೆ. ತರುವಾಯ ನನ್ನ ರಾಯಭಾರಿಗಳು ಯಾವ ಉತ್ತರದೊಂದಿಗೆ ಮರಳುತ್ತಾರೆಂದು ನೋಡುತ್ತೇನೆ."

وَاِنِّيْ مُرْسِلَةٌ اِلَيْهِمْ بِهَدِيَّةٍ فَنٰظِرَةٌۢ
بِمَ يَرْجِعُ الْمُرْسَلُوْنَ ﴿٣٥﴾

36. ಅವರು (ರಾಣಿಯ ದೂತರು) ಸುಲೈಮಾನರ ಬಳಿಗೆ ಬಂದಾಗ ಅವರು ಹೇಳಿದರು, "ನೀವು ಧನದ ಮೂಲಕ ನನಗೆ ಸಹಾಯ ಮಾಡಲಿಚ್ಛಿಸುತ್ತೀರಾ? ಅಲ್ಲಾಹನು ನನಗೆ ನೀಡಿರುವುದು ನಿಮಗೆ

فَلَمَّا جَآءَ سُلَيْمٰنَ قَالَ اَتُمِدُّوْنَنِ
بِمَالٍ فَمَآ اٰتٰىنِۦَ اللّٰهُ خَيْرٌ مِّمَّآ اٰتٰىكُمْ
بَلْ اَنْتُمْ بِهَدِيَّتِكُمْ تَفْرَحُوْنَ ﴿٣٦﴾

6. ನಡುವಿನ ವೃತ್ತಾಂತವನ್ನು ಬಿಟ್ಟು 'ಹುದ್‌ಹುದ್' ಪತ್ರವನ್ನು ರಾಣಿಯ ಮುಂದೆ ಎಸೆದು ಬಿಟ್ಟ ಸಂದರ್ಭದ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ.

7. ಅರ್ಥಾತ್- ಇಸ್ಲಾಮ್ ಸ್ವೀಕರಿಸಿ ಅಥವಾ ಆಜ್ಞಾಪಾಲಕರಾಗಿ.

ಕೊಟ್ಟಿರುವುದಕ್ಕಿಂತ ಎಷ್ಟೋ ಅಧಿಕವಿದೆ. ನಿಮ್ಮ ಉಡುಗೊರೆ ನಿಮಗೇ ಭೂಷಣವಾಗಿರಲಿ.

37. (ರಾಯಭಾರಿಯೇ!) ನಿನ್ನನ್ನು ಕಳುಹಿಸಿದವರ ಕಡೆಗೆ ಮರಳು. ನಾವು ಅವರ ಮೇಲೆ ಅವರಿಂದ ಎದುರಿಸಲಾಗದಂತಹ ಸೇನೆಯನ್ನು ತರುವೆವು ಮತ್ತು ಅವರು ನಿಂದ್ಯರಾಗಿ ಹೋಗುವಂತೆ ಅವರನ್ನು ಅವಮಾನಿಸಿ ಹೊರಕ್ಕಟ್ಟುವೆವು."

ارْجِعْ إِلَيْهِمْ فَلَنَأْتِيَنَّهُم بِجُنُودٍ لَّا
قِبَلَ لَهُم بِهَا وَلَنُخْرِجَنَّهُم مِّنْهَا
أَذِلَّةً وَهُمْ صَاغِرُونَ ﴿٣٧﴾

38. ಸುಲೈಮಾನರು, "ಆಸ್ಥಾನದವರೇ, ಅವರು ಶರಣಾಗತರಾಗಿ ನನ್ನ ಮುಂದೆ ಹಾಜರಾಗುವುದ ಕ್ಕಿಂತ ಮುಂಚೆಯೇ ಅವಳ ಸಿಂಹಾ ಸನವನ್ನು ನನ್ನ ಬಳಿಗೆ ತರಬಲ್ಲವರು ನಿಮ್ಮಲ್ಲಿ ಯಾರಿದ್ದಾರೆ?" ಎಂದು ಕೇಳಿದರು.

قَالَ يَا أَيُّهَا الْمَلَأُ أَيُّكُمْ يَأْتِينِي
بِعَرْشِهَا قَبْلَ أَن يَأْتُونِي مُسْلِمِينَ ﴿٣٨﴾

39. ಯಕ್ಷರ ಪೈಕಿ ಓರ್ವ ದೃಢಕಾಯನು, "ತಾವು ತಮ್ಮ ಸ್ಥಾನದಿಂದ ಏಳುವುದಕ್ಕೆ ಮುಂಚೆಯೇ ನಾನು ಅದನ್ನು ತಂದು ಹಾಜರು ಪಡಿಸುವೆನು. ನಾನು ಅದಕ್ಕೆ ಶಕ್ತನೂ ಪ್ರಾಮಾಣಿಕನೂ ಆಗಿದ್ದೇನೆ" ಎಂದು ಬಿನ್ನವಿಸಿದನು.

قَالَ عِفْرِيتٌ مِّنَ الْجِنِّ أَنَا آتِيكَ
بِهِ قَبْلَ أَن تَقُومَ مِن مَّقَامِكَ ۖ
وَإِنِّي عَلَيْهِ لَقَوِيٌّ أَمِينٌ ﴿٣٩﴾

40. ಗ್ರಂಥ ಜ್ಞಾನವೊಂದನ್ನು ಹೊಂದಿದವನೊಬ್ಬನು, "ತಾವು ರೆಪ್ಪೆ ಬಡಿಯುವುದಕ್ಕೆ ಮುಂಚೆ ನಾನು ಅದನ್ನು ತರುತ್ತೇನೆ" ಎಂದನು. ಆಗಲೇ ಸುಲೈಮಾನರು ಆ ಸಿಂಹಾಸನವು ತನ್ನ ಮುಂದೆ ಇಡಲ್ಪಟ್ಟಿರುವುದನ್ನು ಕಂಡಾಗ, "ನಾನು ಕೃತಜ್ಞತೆ ತೋರುತ್ತೇನೋ, ಕೃತಘ್ನನಾಗಿ ಬಿಡುತ್ತೇನೋ ಎಂದು ನನ್ನನ್ನು ಪರೀಕ್ಷಿಸಲಿಕ್ಕಾಗಿ ಇದು ನನ್ನ ಪ್ರಭುವಿನ ಅನುಗ್ರಹವಾಗಿರುತ್ತದೆ. ಕೃತಜ್ಞತೆ ತೋರುವವನ ಕೃತಜ್ಞತೆಯು ಅವನಿಗೇ ಲಾಭದಾಯಕವಾಗಿದೆ. ಯಾರಾದರೂ ಕೃತಘ್ನತೆ ತೋರಿದರೆ ನನ್ನ ಪ್ರಭು ನಿರಪೇಕ್ಷನೂ ಸ್ವಯಂ ಸನ್ಮಾನ್ಯನೂ ಆಗಿರುತ್ತಾನೆ" ಎಂದು ಉದ್ಗರಿಸಿದರು.

قَالَ الَّذِي عِندَهُ عِلْمٌ مِّنَ الْكِتَابِ أَنَا
آتِيكَ بِهِ قَبْلَ أَن يَرْتَدَّ إِلَيْكَ طَرْفُكَ ۚ
فَلَمَّا رَآهُ مُسْتَقِرًّا عِندَهُ قَالَ هَٰذَا
مِن فَضْلِ رَبِّي لِيَبْلُوَنِي أَأَشْكُرُ
أَمْ أَكْفُرُ ۖ وَمَن شَكَرَ فَإِنَّمَا يَشْكُرُ
لِنَفْسِهِ ۖ وَمَن كَفَرَ فَإِنَّ رَبِّي غَنِيٌّ كَرِيمٌ ﴿٤٠﴾

41. ಸುಲೈಮಾನರು,[8] "ಅವಳಿಗೆ ತಿಳಿಯದಂತೆ ಅವಳ ಸಿಂಹಾಸನವನ್ನು ಅವಳ ಮುಂದಿರಿಸಿ ಬಿಡಿರಿ. ಅವಳು ಸರಿ ದಾರಿಗೆ ತಲಪುತ್ತಾಳೋ, ಪಥಭ್ರಷ್ಟರಲ್ಲಾಗಿದ್ದಾಳೋ ಎಂದು ನೋಡೋಣ" ಎಂದರು.

قَالَ نَكِّرُوا لَهَا عَرْشَهَا نَنظُرْ أَتَهْتَدِي
أَمْ تَكُونُ مِنَ الَّذِينَ لَا يَهْتَدُونَ ﴿٤١﴾

42. ರಾಣಿಯು ಹಾಜರಾದಾಗ ಅವಳೊಡನೆ, "ನಿನ್ನ ಸಿಂಹಾಸನ ಹೀಗೆಯೇ ಇದೆಯೇ" ಎಂದು ಕೇಳಲಾಯಿತು. ಆಗ ಅವಳು, "ಇದು ಅದುವೇ

فَلَمَّا جَاءَتْ قِيلَ أَهَٰكَذَا عَرْشُكِ ۖ
قَالَتْ كَأَنَّهُ هُوَ ۚ وَأُوتِينَا الْعِلْمَ

8. ಸಬಾದ ರಾಣಿ, ಹ. ಸುಲೈಮಾನ್‌ರನ್ನು(ಅ) ಭೇಟಿಯಾಗಲು ಹಾಜರಾದ ಸಂದರ್ಭದ ಪ್ರಸ್ತಾಪ ಇಲ್ಲಿಂದ ಆರಂಭವಾಗುತ್ತದೆ.

مِن قَبْلِهَا وَكُنَّا مُسْلِمِينَ ﴿٤٢﴾

ಎಂಬಂತಿದೆ. ನಾವಂತೂ ಮೊದಲೇ ತಿಳಿದುಕೊಂಡಿದ್ದೆವು ಮತ್ತು ನಾವು ಮುಸ್ಲಿಮರಾಗಿ (ಶರಣಾಗತರಾಗಿ) ಬಿಟ್ಟಿದ್ದೆವು"[9] ಎಂದಳು.

وَصَدَّهَا مَا كَانَت تَّعْبُدُ مِن دُونِ اللَّهِ ۖ إِنَّهَا كَانَتْ مِن قَوْمٍ كَافِرِينَ ﴿٤٣﴾

43. ಅಲ್ಲಾಹನನ್ನು ಬಿಟ್ಟು ಅವಳು ಪೂಜಿಸುತ್ತಿದ್ದ ಆರಾಧ್ಯರ ಆರಾಧನೆಯೇ ಅವಳನ್ನು (ಸತ್ಯವಿಶ್ವಾಸ ಸ್ವೀಕಾರದಿಂದ) ತಡೆದಿತ್ತು. ಏಕೆಂದರೆ ಅವಳೊಂದು ಸತ್ಯನಿಷೇಧಿ ಜನಾಂಗದವಳಾಗಿದ್ದಳು.

قِيلَ لَهَا ادْخُلِي الصَّرْحَ ۖ فَلَمَّا رَأَتْهُ حَسِبَتْهُ لُجَّةً وَكَشَفَتْ عَن سَاقَيْهَا ۚ قَالَ إِنَّهُ صَرْحٌ مُّمَرَّدٌ مِّن قَوَارِيرَ ۗ قَالَتْ رَبِّ إِنِّي ظَلَمْتُ نَفْسِي وَأَسْلَمْتُ مَعَ سُلَيْمَانَ لِلَّهِ رَبِّ الْعَالَمِينَ ﴿٤٤﴾ ع ١٨

44. ಅರಮನೆಯೊಳಗೆ ಪ್ರವೇಶಿಸು ಎಂದು ಅವಳೊಡನೆ ಹೇಳಲಾಯಿತು. ಅವಳು ಅದನ್ನು ಕಂಡಾಗ ನೀರಿನ ಕೊಳವೆಂದು ಭಾವಿಸಿ ಇಳಿಯಲಿಕ್ಕಾಗಿ ಇಜಾರಿನ ಕಾಲುಗಳನ್ನು ಮೇಲೇರಿಸಿ ಕೊಂಡಳು. ಆಗ ಸುಲೈಮಾನರು, "ಇದು ಗಾಜಿನ ನುಣುಪಾದ ಹಾಸು" ಎಂದರು. ಆಗ ಅವಳು, "ಓ ನನ್ನ ಪ್ರಭೂ! (ಇಷ್ಟರವರೆಗೆ) ನಾನು ನನ್ನ ಮೇಲೆಯೇ ಅಕ್ರಮವೆಸಗುತ್ತಿದ್ದೆ. ಈಗ ನಾನು ಸುಲೈಮಾನರೊಂದಿಗೆ, ಸಕಲ ಲೋಕಗಳ ಪಾಲಕ ಪ್ರಭುವಾದ ಅಲ್ಲಾಹನ ವಿಧೇಯತೆಯನ್ನು ಸ್ವೀಕರಿಸಿಕೊಂಡೆ" ಎಂದು ಉದ್ಗರಿಸಿದಳು.

وَلَقَدْ أَرْسَلْنَا إِلَىٰ ثَمُودَ أَخَاهُمْ صَالِحًا أَنِ اعْبُدُوا اللَّهَ فَإِذَا هُمْ فَرِيقَانِ يَخْتَصِمُونَ ﴿٤٥﴾

45. ಮತ್ತು ನಾವು ಸಮೂದರ ಕಡೆಗೆ ಅವರ ಸಹೋದರ ಸಾಲಿಹರನ್ನು ಅಲ್ಲಾಹನ ದಾಸ್ಯ ಕೈಗೊಳ್ಳಿರೆಂದು (ಸಂದೇಶ ಕೊಟ್ಟು) ಕಳುಹಿಸಿದೆವು. ಆಗ ಅವರು ಹಠಾತ್ತನೆ ಎರಡು ಜಗಳಾಡುವ ತಂಡಗಳಾಗಿ ಬಿಟ್ಟರು.

قَالَ يَا قَوْمِ لِمَ تَسْتَعْجِلُونَ بِالسَّيِّئَةِ قَبْلَ الْحَسَنَةِ ۖ لَوْلَا تَسْتَغْفِرُونَ اللَّهَ لَعَلَّكُمْ تُرْحَمُونَ ﴿٤٦﴾

46. ಸಾಲಿಹರು, "ನನ್ನ ಜನಾಂಗದವರೇ, ಒಳಿತಿಗಿಂತ ಮೊದಲು ಕೆಡುಕಿಗಾಗಿ ತ್ವರೆ ಮಾಡುವಿರೇಕೆ? ನಿಮ್ಮ ಮೇಲೆ ಕೃಪೆ ತೋರುವಂತಾಗಲು ನೀವು ಅಲ್ಲಾಹನೊಡನೆ ಕ್ಷಮಾಯಾಚನೆ ಮಾಡುವುದಿಲ್ಲವೇಕೆ?" ಎಂದರು.

قَالُوا اطَّيَّرْنَا بِكَ وَبِمَن مَّعَكَ ۚ قَالَ طَائِرُكُمْ عِندَ اللَّهِ ۖ بَلْ أَنتُمْ قَوْمٌ تُفْتَنُونَ ﴿٤٧﴾

47. ಆಗ ಅವರು, "ನಾವು ನಿನ್ನನ್ನೂ, ನಿನ್ನ ಜೊತೆಗಾರರನ್ನೂ ಅಪಶಕುನವಾಗಿ ಕಂಡಿದ್ದೇವೆ" ಎಂದರು. ಅದಕ್ಕೆ ಸಾಲಿಹರು, "ನಿಮ್ಮ ಶುಭಾಶುಭ ಶಕುನಗಳ ಮೂಲ ಅಲ್ಲಾಹನ ಬಳಿ ಇದೆ. ವಾಸ್ತವದಲ್ಲಿ ನಿಮ್ಮೆಲ್ಲರ ಪರೀಕ್ಷೆ ನಡೆಯುತ್ತಲಿದೆ" ಎಂದು ಉತ್ತರಿಸಿದರು.

وَكَانَ فِي الْمَدِينَةِ تِسْعَةُ رَهْطٍ يُفْسِدُونَ فِي الْأَرْضِ وَلَا يُصْلِحُونَ ﴿٤٨﴾

48. ಆ ನಗರದಲ್ಲಿ ಒಂಭತ್ತು ಗುಂಪಿನವರಿದ್ದರು. ಅವರು ನಾಡಿನೊಳಗೆ ಗೊಂದಲ ಹಬ್ಬಿಸುತ್ತಿದ್ದರು ಮತ್ತು ಯಾವ ಸುಧಾರಣಾ ಕಾರ್ಯವನ್ನೂ ಮಾಡುತ್ತಿರಲಿಲ್ಲ.

9. ಅರ್ಥಾತ್- ಈ ಪವಾಡವನ್ನು ನೋಡುವ ಮೊದಲೇ ನಮಗೆ ತಿಳಿದಿದ್ದ ಹ. ಸುಲೈಮಾನ್‌ರ(ಅ) ಗುಣವಿಶೇಷತೆ ಮತ್ತು ವಿವರಣೆಗಳಿಂದಾಗಿ ಅವರು ಅಲ್ಲಾಹನ ಪ್ರವಾದಿಯಾಗಿದ್ದಾರೆ. ಕೇವಲ ಒಂದು ಸಾಮ್ರಾಜ್ಯದ ಆಡಳಿತಾಧಿಕಾರಿ ಮಾತ್ರವಲ್ಲ ಎಂದು ನಮಗೆ ಖಾತ್ರಿಯಾಗಿತ್ತು.

49. ಅವರು ಪರಸ್ಪರ ಹೀಗೆಂದರು; "ನಾವು ಸಾಲಿಹ್ ಮತ್ತು ಅವನ ಮನೆಯವರ ಮೇಲೆ ನಿಶಾಕ್ರಮಣಗೈದು ಕೊಲ್ಲುವೆವೆಂದು ದೇವ ನಾಣೆ ಹಾಕಿ ಪ್ರತಿಜ್ಞೆ ಮಾಡಿಕೊಳ್ಳಿರಿ. ಅನಂತರ ಅವನ ಆಶ್ರಯದಾತ ನೊಡನೆ ಆ ಕುಟುಂಬವು ನಾಶಗೊಂಡ ಸಂದರ್ಭದಲ್ಲಿ ನಾವಿರಲೇ ಇಲ್ಲ, ನಾವು ನಿಜವನ್ನೇ ಹೇಳುತ್ತೇವೆ ಎಂದು ಹೇಳೋಣ."[10]

قَالُوْا تَقَاسَمُوْا بِاللّٰهِ لَنُبَيِّتَنَّهٗ وَاَهْلَهٗ
ثُمَّ لَنَقُوْلَنَّ لِوَلِيِّهٖ مَا شَهِدْنَا مَهْلِكَ
اَهْلِهٖ وَاِنَّا لَصٰدِقُوْنَ ﴿٤٩﴾

50. ಈ ಕುತಂತ್ರವನ್ನು ಅವರು ಹೂಡಿದರು ಮತ್ತು ಒಂದು ಪ್ರತಿ ತಂತ್ರವನ್ನು ನಾವೂ ಹೂಡಿದೆವು. ಅದು ಅವರಿಗೆ ತಿಳಿದಿರಲಿಲ್ಲ.

وَمَكَرُوْا مَكْرًا وَّمَكَرْنَا مَكْرًا وَّ
هُمْ لَا يَشْعُرُوْنَ ﴿٥٠﴾

51. ಅವರ ಕುತಂತ್ರದ ಪರಿಣಾಮ ಏನಾಯಿತೆಂದು ಇದೀಗ ನೋಡಿ ಕೊಳ್ಳಿರಿ. ನಾವು ಅವರನ್ನೂ ಅವರ ಇಡೀ ಜನಾಂಗವನ್ನೂ ನಾಶ ಗೊಳಿಸಿ ಬಿಟ್ಟೆವು.

فَانْظُرْ كَيْفَ كَانَ عَاقِبَةُ مَكْرِهِمْ ۙ
اَنَّا دَمَّرْنٰهُمْ وَقَوْمَهُمْ اَجْمَعِيْنَ ﴿٥١﴾

52. ಅವರು ಮಾಡುತ್ತಿದ್ದ ಅಕ್ರಮದ ಫಲವಾಗಿ ಅದೋ ಅವರ ಮನೆಗಳು ಪಾಳುಬಿದ್ದಿವೆ. ತಿಳುವಳಿಕೆ ಇರುವವರಿಗೆ ಇದರಲ್ಲೊಂದು ನಿದರ್ಶನವಿದೆ.

فَتِلْكَ بُيُوْتُهُمْ خَاوِيَةًۢ بِمَا ظَلَمُوْا ؕ
اِنَّ فِيْ ذٰلِكَ لَاٰيَةً لِّقَوْمٍ يَّعْلَمُوْنَ ﴿٥٢﴾

53. ಮತ್ತು ಸತ್ಯವಿಶ್ವಾಸವಿರಿಸಿಕೊಂಡಿದ್ದವರನ್ನೂ ಆಜ್ಞೋಲ್ಲಂಘನೆ ಯಿಂದ ದೂರವಿದ್ದವರನ್ನೂ ನಾವು ರಕ್ಷಿಸಿದೆವು.

وَاَنْجَيْنَا الَّذِيْنَ اٰمَنُوْا وَكَانُوْا
يَتَّقُوْنَ ﴿٥٣﴾

54. ಮತ್ತು ಲೂತರನ್ನು ನಾವು ಕಳುಹಿಸಿದೆವು. ಅವರು ತಮ್ಮ ಜನಾಂಗದವರೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ; "ನೀವು ಕಣ್ಣಾರೆ ಕಾಣುತ್ತ ದುಷ್ಕೃತ್ಯವೆಸಗುತ್ತೀರಾ?[11]

وَلُوْطًا اِذْ قَالَ لِقَوْمِهٖۤ اَتَاْتُوْنَ
الْفَاحِشَةَ وَاَنْتُمْ تُبْصِرُوْنَ ﴿٥٤﴾

55. ಸ್ತ್ರೀಯರನ್ನು ಬಿಟ್ಟು ಪುರುಷರ ಬಳಿಗೆ ಕಾಮಾಪೇಕ್ಷೆ ನೀಗಿಸಲಿಕ್ಕಾಗಿ ಹೋಗುವುದೇ ನಿಮ್ಮ ಚಾಳಿಯೇ? ವಾಸ್ತವದಲ್ಲಿ ನೀವು ಅತ್ಯಂತ ತಿಳಿಗೇಡಿ ಕಾರ್ಯವನ್ನೆಸಗುತ್ತೀರಿ."

اَئِنَّكُمْ لَتَاْتُوْنَ الرِّجَالَ شَهْوَةً
مِّنْ دُوْنِ النِّسَآءِ ؕ بَلْ اَنْتُمْ
قَوْمٌ تَجْهَلُوْنَ ﴿٥٥﴾

10. ಅರ್ಥಾತ್- ಹ. ಸಾಲಿಹ್‌ರ(ಅ) ಗೋತ್ರದ ಸರದಾರರೊಡನೆ ಪುರಾತನ ಕಾಲದ ಪದ್ಧತಿಯಂತೆ ಅವರಿಗೆ ತಮ್ಮ ಗೋತ್ರದ ಪರವಾಗಿ ರಕ್ತ ಪರಿಹಾರ ಕೇಳುವ ಹಕ್ಕಿತ್ತು. ಇದು ಪ್ರವಾದಿವರ್ಯರ(ಸ) ಕಾಲದಲ್ಲಿ ಅವರ ಚಿಕ್ಕಪ್ಪ ಅಬೂತಾಲಿಬ್‌ಗೆ ಇದ್ದ ಸ್ಥಾನಕ್ಕೆ ಸಮಾನವಾಗಿದೆ. ಪ್ರವಾದಿವರ್ಯರನ್ನು(ಸ) ಕೊಲೆ ಮಾಡಿದರೆ ಬನೀಹಾಶಿಮ್ ಗೋತ್ರದ ಸರದಾರ ಅಬೂತಾಲಿಬ್ ತಮ್ಮ ಗೋತ್ರದ ಪರವಾಗಿ ರಕ್ತ ಪರಿಹಾರದ ಹಕ್ಕು ಯಾಚಿಸಬಹುದೆಂಬ ಭಯದಿಂದಲೇ ಕುರೈಶ್‌ರ ಪೈಕಿಯ ಸತ್ಯನಿಷೇಧಿಗಳು ತಮ್ಮನ್ನು ತಡೆದಿರಿಸಿಕೊಂಡಿದ್ದರು.

11. ಅರ್ಥಾತ್- ಪರಸ್ಪರರ ಎದುರಿನಲ್ಲೇ ಕೆಟ್ಟ ಕೆಲಸ ಮಾಡುತ್ತೀರಿ. ಮುಂದೆ ಸೂರಃ ಅಂಕಬೂತ್‌ನ 29ನೆಯ ಸೂಕ್ತದಲ್ಲೂ ಅವರು ತಮ್ಮ ಸಭೆಗಳಲ್ಲಿ ಈ ರೀತಿಯ ದುಷ್ಕೃತ್ಯವೆಸಗುತ್ತಿದ್ದರು ಎಂದು ಸ್ಪಷ್ಟಪಡಿಸಲಾಗಿದೆ.

56. ಆದರೆ ಅವರ ಜನಾಂಗದ ಉತ್ತರವು- "ಲೂತರ ಮನೆಯವರನ್ನು ನಿಮ್ಮ ನಾಡಿನಿಂದ ಹೊರಕ್ಕಟ್ಟಿ ಬಿಡಿರಿ. ಮಹಾ ಪರಿಶುದ್ಧರಾಗ ಹೊರಟಿದ್ದಾರಿವರು!" ಎಂದಿಷ್ಟೇ ಹೊರತು ಬೇರೇನೂ ಆಗಿರಲಿಲ್ಲ.

فَمَا كَانَ جَوَابَ قَوْمِهِ إِلَّا أَنْ قَالُوا أَخْرِجُوا آلَ لُوطٍ مِنْ قَرْيَتِكُمْ إِنَّهُمْ أُنَاسٌ يَتَطَهَّرُونَ ﴿٥٦﴾

57. ಕೊನೆಗೆ ನಾವು ಅವರನ್ನೂ ಅವರ ಮನೆಯವರನ್ನೂ- ಅವರ ಪತ್ನಿಯನ್ನು ಹೊರತುಪಡಿಸಿ- ರಕ್ಷಿಸಿದೆವು. ಅವಳು ಹಿಂದೆ ಉಳಿಯುವವಳಾಗಿರಬೇಕು ಎಂಬುದನ್ನು ನಾವು ನಿರ್ಧರಿಸಿ ಬಿಟ್ಟಿದ್ದೆವು.

فَأَنْجَيْنَاهُ وَأَهْلَهُ إِلَّا امْرَأَتَهُ قَدَّرْنَاهَا مِنَ الْغَابِرِينَ ﴿٥٧﴾

58. ಮತ್ತು ನಾವು ಅವರ ಮೇಲೆ ಒಂದು ಮಳೆ ಸುರಿಸಿದೆವು. ಎಚ್ಚರಿಕೆ ನೀಡಲ್ಪಟ್ಟವರ ಪಾಲಿಗೆ ಅದು ಅತ್ಯಂತ ಕೆಟ್ಟ ಮಳೆಯಾಗಿತ್ತು.

وَأَمْطَرْنَا عَلَيْهِمْ مَطَرًا فَسَاءَ مَطَرُ الْمُنْذَرِينَ ﴿٥٨﴾

59. (ಪೈಗಂಬರರೇ) ಪ್ರಶಂಸೆಗಳೆಲ್ಲ ಅಲ್ಲಾಹನಿಗೆ ಮತ್ತು ಅವನು ಪುನೀತಗೊಳಿಸಿದ ಅವನ ದಾಸರ ಮೇಲೆ ಶಾಂತಿ ಇರಲೆಂದು ಹೇಳಿರಿ. (ಇವರೊಡನೆ ಕೇಳಿರಿ) ಅಲ್ಲಾಹನು ಉತ್ತಮನೋ ಅಥವಾ ಇವರು ಅವನ ಸಹಭಾಗಿಗಳಾಗಿ ಮಾಡುವ ಆರಾಧ್ಯರುಗಳು ಉತ್ತಮರೋ?

قُلِ الْحَمْدُ لِلَّهِ وَسَلَامٌ عَلَىٰ عِبَادِهِ الَّذِينَ اصْطَفَىٰ ۗ آللَّهُ خَيْرٌ أَمَّا يُشْرِكُونَ ﴿٥٩﴾

60. *ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನೂ ನಿಮಗಾಗಿ ಆಕಾಶದಿಂದ ನೀರನ್ನು ಸುರಿಸಿದವನೂ ತನ್ಮೂಲಕ ನಿಮ್ಮಿಂದ ಬೆಳೆಸಲು ಸಾಧ್ಯವಿಲ್ಲದ ಮರಗಳಿರುವ ಸುಂದರ ಉದ್ಯಾನಗಳನ್ನು ಬೆಳೆಸಿದವನೂ ಯಾರು? ಅಲ್ಲಾಹನೊಂದಿಗೆ ಇತರ ದೇವರೂ (ಈ ಕಾರ್ಯಗಳಲ್ಲಿ ಸಹಭಾಗಿಯಾಗಿ) ಇರುವರೇ?(ಇಲ್ಲ.) ವಾಸ್ತವದಲ್ಲಿ ಇವರೇ ನೇರ ಮಾರ್ಗದಿಂದ ಸರಿದು ನಡೆಯುತ್ತಿದ್ದಾರೆ.

أَمَّنْ خَلَقَ السَّمَاوَاتِ وَالْأَرْضَ وَأَنْزَلَ لَكُمْ مِنَ السَّمَاءِ مَاءً فَأَنْبَتْنَا بِهِ حَدَائِقَ ذَاتَ بَهْجَةٍ مَا كَانَ لَكُمْ أَنْ تُنْبِتُوا شَجَرَهَا ۗ أَإِلَٰهٌ مَعَ اللَّهِ ۚ بَلْ هُمْ قَوْمٌ يَعْدِلُونَ ﴿٦٠﴾

61. ಭೂಮಿಯನ್ನು ವಾಸಸ್ಥಾನವನ್ನಾಗಿ ಮಾಡಿದವನೂ ಅದರೊಳಗೆ ನದಿಗಳನ್ನು ಹರಿಸಿದವನೂ ಅದರಲ್ಲಿ (ಪರ್ವತಗಳ) ಮೊಳೆಗಳನ್ನು ನಾಟಿದವನೂ ಎರಡು ಜಲಾಗಾರಗಳ ಮಧ್ಯೆ ತಡೆಯನ್ನಿರಿಸಿದವನೂ ಯಾರು? ಅಲ್ಲಾಹನೊಂದಿಗೆ ಇತರ ದೇವರೂ (ಈ ಕಾರ್ಯಗಳಲ್ಲಿ ಸಹಭಾಗಿಯಾಗಿ) ಇರುವರೇ? ಇಲ್ಲ; ಆದರೆ ಇವರಲ್ಲಿ ಹೆಚ್ಚಿನವರು ತಿಳಿಗೇಡಿಗಳು.

أَمَّنْ جَعَلَ الْأَرْضَ قَرَارًا وَجَعَلَ خِلَالَهَا أَنْهَارًا وَجَعَلَ لَهَا رَوَاسِيَ وَجَعَلَ بَيْنَ الْبَحْرَيْنِ حَاجِزًا ۗ أَإِلَٰهٌ مَعَ اللَّهِ ۚ بَلْ أَكْثَرُهُمْ لَا يَعْلَمُونَ ﴿٦١﴾

62. ಕಳವಳಗೊಂಡವನು ಅವನನ್ನು ಪ್ರಾರ್ಥಿಸಿದಾಗ ಅವನ

أَمَّنْ يُجِيبُ الْمُضْطَرَّ إِذَا دَعَاهُ وَيَكْشِفُ

* **ಇಲ್ಲಿಂದ 20ನೆಯ ಕಾಂಡ ಆರಂಭ.**

السُّوْٓءَ وَيَجْعَلُكُمْ خُلَفَآءَ الْاَرْضِ ؕ ءَاِلٰهٌ مَّعَ اللّٰهِ ؕ قَلِيْلًا مَّا تَذَكَّرُوْنَ ؕ ٦٢

ಪ್ರಾರ್ಥನೆಯನ್ನು ಆಲಿಸುವವನಾರು? ಅವನ ಸಂಕಷ್ಟವನ್ನು ನಿವಾರಿಸುವವನು ಯಾರು? ಮತ್ತು ನಿಮ್ಮನ್ನು ಭೂಮಿಯ ಪ್ರತಿನಿಧಿಯಾಗಿ ಮಾಡುವವನು ಯಾರು? ಅಲ್ಲಾಹನೊಂದಿಗೆ ಇತರ ದೇವರೂ (ಈ ಕಾರ್ಯವನ್ನೆಸಗಲು) ಇರುವರೇ? ನೀವು ಅಲ್ಪವೇ ವಿವೇಚಿಸುತ್ತೀರಿ.

اَمَّنْ يَّهْدِيْكُمْ فِىْ ظُلُمٰتِ الْبَرِّ وَالْبَحْرِ وَمَنْ يُّرْسِلُ الرِّيٰحَ بُشْرًاۢ بَيْنَ يَدَىْ رَحْمَتِهٖ ؕ ءَاِلٰهٌ مَّعَ اللّٰهِ ؕ تَعٰلَى اللّٰهُ عَمَّا يُشْرِكُوْنَ ؕ ٦٣

63. ನೆಲ ಹಾಗೂ ಸಾಗರಗಳ ಅಂಧಕಾರಗಳಲ್ಲಿ ನಿಮಗೆ ದಾರಿ ತೋರಿಸುವವನೂ ತನ್ನ ಕೃಪೆಗಿಂತ ಮುಂಚಿತವಾಗಿ ಮಾರುತಗಳನ್ನು ಸುವಾರ್ತೆಯೊಂದಿಗೆ ಕಳುಹಿಸುವವನೂ ಯಾರು? ಅಲ್ಲಾಹನೊಂದಿಗೆ ಇತರ ದೇವರೂ ಇರುವರೇ? ಅಲ್ಲಾಹನು ಇವರು ಮಾಡುತ್ತಿರುವ 'ದೇವ ಸಹಭಾಗಿತ್ವ'ಗಿಂತ ಮಹೋನ್ನತನು.

اَمَّنْ يَّبْدَؤُا الْخَلْقَ ثُمَّ يُعِيْدُهٗ وَمَنْ يَّرْزُقُكُمْ مِّنَ السَّمَآءِ وَالْاَرْضِ ؕ ءَاِلٰهٌ مَّعَ اللّٰهِ ؕ قُلْ هَاتُوْا بُرْهَانَكُمْ اِنْ كُنْتُمْ صٰدِقِيْنَ ٦٤

64. ಸೃಷ್ಟಿಯನ್ನಾರಂಭಿಸುವವನೂ ಆ ಬಳಿಕ ಅದರ ಪುನರಾವರ್ತನೆ ಮಾಡುವವನೂ ಯಾರು? ನಿಮಗೆ ಆಕಾಶಗಳಿಂದಲೂ ಭೂಮಿಯಿಂದಲೂ ಜೀವನಾಧಾರ ಕೊಡುವವನಾರು? ಅಲ್ಲಾಹನ ಜೊತೆ ಇತರ ದೇವರೂ(ಈ ಕಾರ್ಯಗಳಲ್ಲಿ ಪಾಲುದಾರರಾಗಿ) ಇರುವರೇ? ಹೇಳಿರಿ- ನೀವು ಸತ್ಯವಾದಿಗಳಾಗಿದ್ದರೆ ಪುರಾವೆಗಳನ್ನು ತನ್ನಿರಿ.

قُلْ لَّا يَعْلَمُ مَنْ فِى السَّمٰوٰتِ وَالْاَرْضِ الْغَيْبَ اِلَّا اللّٰهُ ؕ وَمَا يَشْعُرُوْنَ اَيَّانَ يُبْعَثُوْنَ ٦٥

65. ಇವರೊಡನೆ ಹೇಳಿರಿ: ಭೂಮಿ-ಆಕಾಶಗಳಲ್ಲಿ, ಪರೋಕ್ಷದ ಜ್ಞಾನವುಳ್ಳವರು ಅಲ್ಲಾಹನ ಹೊರತು ಯಾರೂ ಇಲ್ಲ ಮತ್ತು ಅವರಿಗಂತೂ (ಆ ನಿಮ್ಮ ಆರಾಧ್ಯರಿಗಂತೂ) ಅವರು ಯಾವಾಗ ಎಬ್ಬಿಸಲ್ಪಡುವರೆಂಬುದೂ ತಿಳಿದಿಲ್ಲ.

بَلِ ادّٰرَكَ عِلْمُهُمْ فِى الْاٰخِرَةِ ۫ بَلْ هُمْ فِىْ شَكٍّ مِّنْهَا ۫ بَلْ هُمْ مِّنْهَا عَمُوْنَ ٦٦

66. ವಾಸ್ತವದಲ್ಲಿ ಪರಲೋಕದ ಬಗೆಗಿರುವ ಜ್ಞಾನವೇ ಇವರಿಂದ ಕಳೆದು ಹೋಗಿದೆ. ಅಲ್ಲ, ಇವರು ಅದರ ಬಗ್ಗೆ ಸಂದೇಹದಲ್ಲಿದ್ದಾರೆ. ಅಲ್ಲ, ಇವರು ಅದರಿಂದ ಕುರುಡರಾಗಿದ್ದಾರೆ.

وَقَالَ الَّذِيْنَ كَفَرُوْٓا ءَاِذَا كُنَّا تُرٰبًا وَّاٰبَآؤُنَآ اَئِنَّا لَمُخْرَجُوْنَ ٦٧

67. ಈ ಸತ್ಯನಿಷೇಧಿಗಳು ಹೇಳುತ್ತಾರೆ, "ನಾವೂ ನಮ್ಮ ಪೂರ್ವಿಕರೂ ಮಣ್ಣಾಗಿ ಹೋದ ಬಳಿಕ ನಿಜಕ್ಕೂ ನಮ್ಮನ್ನು ಸಮಾಧಿಗಳಿಂದ ಹೊರ ತರಲಾಗುವುದೇ?

لَقَدْ وُعِدْنَا هٰذَا نَحْنُ وَاٰبَآؤُنَا مِنْ قَبْلُ ۙ اِنْ هٰذَآ اِلَّآ اَسَاطِيْرُ الْاَوَّلِيْنَ ٦٨

68. ಇಂತಹ ವಾಗ್ದಾನಗಳು ನಮಗೂ ತುಂಬಾ ಕೊಡಲ್ಪಟ್ಟಿವೆ ಮತ್ತು ಹಿಂದೆ ನಮ್ಮ ಪೂರ್ವಿಕರಿಗೂ ಕೊಡಲ್ಪಟ್ಟಿದ್ದುವು, ಆದರೆ ಇವೆಲ್ಲ ಗತ ಕಾಲಗಳಿಂದಲೇ ಕೇಳುತ್ತ ಬಂದಿರುವ ಬರಿಯ ಕಟ್ಟುಕತೆಗಳೇ ಆಗಿರುತ್ತವೆ."

69. "ಭೂಮಿಯ ಮೇಲೆ ಒಂದಿಷ್ಟು ಸಂಚಾರ ಮಾಡಿ ಅಪರಾಧಿಗಳ ಪರಿಣಾಮ ಏನಾಗಿತ್ತೆಂದು ನೋಡಿರಿ" ಎಂದು ಹೇಳಿರಿ.

قُلْ سِيرُوا فِي الْأَرْضِ فَانْظُرُوا كَيْفَ كَانَ عَاقِبَةُ الْمُجْرِمِينَ ﴿٦٩﴾

70. ಪೈಗಂಬರರೇ, ಇವರ ಅವಸ್ಥೆಗೆ ಮರುಗಬೇಡಿರಿ ಮತ್ತು ಇವರ ಸಂಚುಗಳ ಬಗ್ಗೆ ವ್ಯಾಕುಲಗೊಳ್ಳಬೇಡಿರಿ.

وَلَا تَحْزَنْ عَلَيْهِمْ وَلَا تَكُنْ فِي ضَيْقٍ مِمَّا يَمْكُرُونَ ﴿٧٠﴾

71. ಅವರು, "ನೀವು ಸತ್ಯವಾದಿಗಳಾಗಿದ್ದರೆ ಈ ಬೆದರಿಕೆ ಈಡೇರುವುದು ಯಾವಾಗ?" ಎನ್ನುತ್ತಾರೆ.

وَيَقُولُونَ مَتَىٰ هَٰذَا الْوَعْدُ إِنْ كُنْتُمْ صَادِقِينَ ﴿٧١﴾

72. "ನೀವು ಯಾವ ಯಾತನೆಗಾಗಿ ತವಕ ಪಡುತ್ತಿರುವಿರೋ ಅದರ ಒಂದಂಶವು ನಿಮ್ಮ ಹತ್ತಿರವೇ ಬಂದು ಬಿಟ್ಟಿರಲೂಬಹುದು" ಎಂದು ಹೇಳಿರಿ.

قُلْ عَسَىٰ أَنْ يَكُونَ رَدِفَ لَكُمْ بَعْضُ الَّذِي تَسْتَعْجِلُونَ ﴿٧٢﴾

73. ನಿಶ್ಚಯವಾಗಿಯೂ ನಿಮ್ಮ ಪ್ರಭು ಜನರ ಮೇಲೆ ಮಹಾ ಅನುಗ್ರಹಶಾಲಿ. ಆದರೆ ಹೆಚ್ಚಿನವರು ಕೃತಜ್ಞತೆ ತೋರುವುದಿಲ್ಲ.

وَإِنَّ رَبَّكَ لَذُو فَضْلٍ عَلَى النَّاسِ وَلَٰكِنَّ أَكْثَرَهُمْ لَا يَشْكُرُونَ ﴿٧٣﴾

74. ಅವರ ಹೃದಯಗಳು ತಮ್ಮೊಳಗೆ ಬಚ್ಚಿಟ್ಟುಕೊಂಡಿರುವುದನ್ನೂ ಅವರು ಪ್ರಕಟಗೊಳಿಸುತ್ತಿರುವುದನ್ನೂ ಖಂಡಿತವಾಗಿಯೂ ನಿಮ್ಮ ಪ್ರಭು ಚೆನ್ನಾಗಿ ಬಲ್ಲನು.

وَإِنَّ رَبَّكَ لَيَعْلَمُ مَا تُكِنُّ صُدُورُهُمْ وَمَا يُعْلِنُونَ ﴿٧٤﴾

75. ಭೂಮಿ, ಆಕಾಶಗಳಲ್ಲಿ ಒಂದು ಸುವ್ಯಕ್ತ ಗ್ರಂಥದಲ್ಲಿ ಬರೆಯಲ್ಪಡದ ಯಾವ ಸುಪ್ತವಸ್ತುವೂ ಇಲ್ಲ.[12]

وَمَا مِنْ غَائِبَةٍ فِي السَّمَاءِ وَالْأَرْضِ إِلَّا فِي كِتَابٍ مُبِينٍ ﴿٧٥﴾

76 ನಿಶ್ಚಯವಾಗಿಯೂ ಈ ಕುರ್‌ಆನ್ ಬನೀಇಸ್ರಾಈಲರಿಗೆ ಅವರು ಭಿನ್ನಾಭಿಪ್ರಾಯವಿರಿಸಿ ಕೊಂಡಿರುವ ಹೆಚ್ಚಿನ ವಿಷಯಗಳ ವಸ್ತುಸ್ಥಿತಿಯನ್ನು ತೋರಿಸಿ ಕೊಡುತ್ತದೆ.

إِنَّ هَٰذَا الْقُرْآنَ يَقُصُّ عَلَىٰ بَنِي إِسْرَائِيلَ أَكْثَرَ الَّذِي هُمْ فِيهِ يَخْتَلِفُونَ ﴿٧٦﴾

77. ಮತ್ತು ಇದು ಸತ್ಯವಿಶ್ವಾಸಿಗಳ ಪಾಲಿಗೆ ಮಾರ್ಗದರ್ಶನವೂ ಕೃಪೆಯೂ ಆಗಿದೆ.

وَإِنَّهُ لَهُدًى وَرَحْمَةٌ لِلْمُؤْمِنِينَ ﴿٧٧﴾

78. ನಿಶ್ಚಯವಾಗಿಯೂ (ಇದೇ ರೀತಿಯಲ್ಲಿ) ನಿಮ್ಮ ಪ್ರಭು ತನ್ನ ಅಪ್ಪಣೆಯಿಂದ ಇವರೊಳಗೂ[13] ತೀರ್ಮಾನ ಮಾಡಿ ಬಿಡುವನು. ಅವನು ಮಹಾ ಪ್ರಬಲನೂ ಸರ್ವಜ್ಞನೂ ಆಗಿರುತ್ತಾನೆ.

إِنَّ رَبَّكَ يَقْضِي بَيْنَهُمْ بِحُكْمِهِ ۚ وَهُوَ الْعَزِيزُ الْعَلِيمُ ﴿٧٨﴾

12. ಸುಸ್ಪಷ್ಟ ಗ್ರಂಥವೆಂದರೆ ವಿಧಿಯ ದಾಖಲೆ.

13. ಅರ್ಥಾತ್- ಕುರೈಶರ ಪೈಕಿಯ ಸತ್ಯನಿಷೇಧಿಗಳು ಮತ್ತು ಸತ್ಯವಿಶ್ವಾಸಿಗಳ ನಡುವೆ.

79. ಆದುದರಿಂದ ಪೈಗಂಬರರೇ, ಅಲ್ಲಾಹನ ಮೇಲೆ ಭರವಸೆ ಇಡಿರಿ. ನಿಶ್ಚಯವಾಗಿಯೂ ನೀವು ಸುಸ್ಪಷ್ಟ ಸತ್ಯದಲ್ಲಿದ್ದೀರಿ.

فَتَوَكَّلْ عَلَى اللّٰهِ ۖ اِنَّكَ عَلَى الْحَقِّ الْمُبِيْنِ ﴿٧٩﴾

80. ನೀವು ಮೃತರಿಗೆ ಕೇಳಿಸಲಾರಿರಿ,[14] ಬೆನ್ನು ತಿರುಗಿಸಿ ಓಡಿ ಹೋಗುತ್ತಿರುವ ಕಿವುಡರವರೆಗೂ ನಿಮ್ಮ ಕೂಗನ್ನು ಮುಟ್ಟಿಸಲಾರಿರಿ.

اِنَّكَ لَا تُسْمِعُ الْمَوْتٰى وَلَا تُسْمِعُ الصُّمَّ
الدُّعَآءَ اِذَا وَلَّوْا مُدْبِرِيْنَ ﴿٨٠﴾

81. ಮತ್ತು ಕುರುಡರಿಗೆ ದಾರಿ ತೋರಿಸಿ ಅವರನ್ನು ದಾರಿ ತಪ್ಪುವುದರಿಂದ ರಕ್ಷಿಸಲಾರಿರಿ. ನೀವು ನಮ್ಮ ಸೂಕ್ತಗಳ ಮೇಲೆ ವಿಶ್ವಾಸವಿರಿಸುವವರಿಗೆ ಹಾಗೂ ಆಜ್ಞಾನುಸರಣೆ ಮಾಡುವವರಿಗೆ ಮಾತ್ರ ನಿಮ್ಮ ಮಾತನ್ನು ಕೇಳಿಸಬಲ್ಲಿರಿ.

وَمَآ اَنْتَ بِهٰدِى الْعُمْىِ عَنْ ضَلٰلَتِهِمْ ۗ
اِنْ تُسْمِعُ اِلَّا مَنْ يُّؤْمِنُ بِاٰيٰتِنَا
فَهُمْ مُّسْلِمُوْنَ ﴿٨١﴾

82. ನಮ್ಮ ವಚನವು ಪೂರ್ಣಗೊಳ್ಳುವ ಕಾಲವು ಅವರ ಮೇಲೆ ಬಂದು ಮುಟ್ಟಿದಾಗ ನಾವು ಅವರಿಗಾಗಿ ಒಂದು ಪ್ರಾಣಿಯನ್ನು ನೆಲದಿಂದ ಹೊರ ತರುವೆವು. ಜನರು ನಮ್ಮ ಸೂಕ್ತಗಳನ್ನು ನಂಬುತ್ತಿರಲಿಲ್ಲವೆಂದು ಅದು ಅವರೊಡನೆ ಮಾತಾಡುವುದು.[15]

وَاِذَا وَقَعَ الْقَوْلُ عَلَيْهِمْ اَخْرَجْنَا لَهُمْ
دَآبَّةً مِّنَ الْاَرْضِ تُكَلِّمُهُمْ ۙ اَنَّ
النَّاسَ كَانُوْا بِاٰيٰتِنَا لَا يُوْقِنُوْنَ ﴿٨٢﴾

83. ನಾವು ಪ್ರತಿಯೊಂದು ಸಮುದಾಯದಿಂದ ನಮ್ಮ ಸೂಕ್ತಗಳನ್ನು ಸುಳ್ಳಾಗಿಸುತ್ತಿದ್ದ ಒಂದು ಸೇನೆಯನ್ನೇ ಸುತ್ತುಗಟ್ಟಿ ತರುವ ದಿನವನ್ನು ಊಹಿಸಿರಿ. ತರುವಾಯ ಅವರನ್ನು (ಅವರ ವಿಧಗಳಿಗನುಸಾರ ವರ್ಗಗಳಾಗಿ) ವಿಂಗಡಿಸಲಾಗುವುದು.

وَيَوْمَ نَحْشُرُ مِنْ كُلِّ اُمَّةٍ فَوْجًا
مِّمَّنْ يُّكَذِّبُ بِاٰيٰتِنَا فَهُمْ يُوْزَعُوْنَ ﴿٨٣﴾

84. ಹೀಗೆ ಎಲ್ಲರೂ ಬಂದಾಗ (ಅವರ ಪ್ರಭು ಅವರೊಡನೆ), "ನೀವು ನನ್ನ ಸೂಕ್ತಗಳನ್ನು ಸುಳ್ಳಾಗಿಸಿ ಬಿಟ್ಟಿರಾ? ವಾಸ್ತವದಲ್ಲಿ ನೀವು

حَتّٰٓى اِذَا جَآءُوْ قَالَ اَكَذَّبْتُمْ بِاٰيٰتِىْ
وَلَمْ تُحِيْطُوْا بِهَا عِلْمًا اَمَّاذَا

14. ಅರ್ಥಾತ್- ಆತ್ಮಸಾಕ್ಷಿ ಸತ್ತು ಹೋಗಿರುವಂತಹ ಜನರು. ತಮ್ಮ ಮೊಂಡುತನ ಮತ್ತು ಸಂಪ್ರದಾಯ ಶರಣತೆಯಿಂದಾಗಿ ಸತ್ಯ-ಮಿಥ್ಯದ ನಡುವಿನ ಅಂತರವನ್ನರಿಯುವ ಸಾಮರ್ಥ್ಯವನ್ನು ಕಳಕೊಂಡಂತಹ ವ್ಯಕ್ತಿಗಳು.

15. ಭೂಮಿಯಲ್ಲಿ ಒಳಿತಿನ ಆದೇಶಕೊಡುವ ಮತ್ತು ಕೆಡುಕಿನಿಂದ ತಡೆಯುವ ಒಬ್ಬನೇ ಒಬ್ಬ ವ್ಯಕ್ತಿ ಇಲ್ಲದಾಗಿ ಬಿಟ್ಟಾಗ ಇದು ಸಂಭವಿಸುತ್ತದೆ ಎಂದು ಹ. ಇಬ್ನ್ ಉಮರ್(ರ) ಹೇಳಿದ್ದಾರೆ. ಅಬೂಸಈದ್ ಖುದ್ರಿಯವರಿಂದ(ರ) ಉದ್ಧೃತವಾದ ಪ್ರವಾದಿವಚನವೊಂದರಲ್ಲಿ ಅವರು ತಾನು ಇದೇ ಮಾತನ್ನು ಪ್ರವಾದಿವರ್ಯರಿಂದ(ಸ) ಕೇಳಿರುವುದಾಗಿ ಹೇಳಿದ್ದಾರೆ. ಮಾನವರು ಒಳಿತಿನ ಆದೇಶ ಕೊಡುವ ಮತ್ತು ಕೆಡುಕಿನಿಂದ ತಡೆಯುವ ಕೆಲಸವನ್ನು ಬಿಟ್ಟು ಬಿಟ್ಟಾಗ ಅಲ್ಲಾಹನು ಪ್ರಾಣಿಯೊಂದರ ಮೂಲಕ ಕೊನೆಯ ಬಾರಿಗೆ ನೆಪಗಳು ಬಾಕಿಯುಳಿಯದಂತೆ ಆಜ್ಞೆಯನ್ನು ತಲಪಿಸುವನು. ಇದು ಒಂದೇ ಪ್ರಾಣಿಯಾಗಿರುವುದೋ ಅಥವಾ ಹೇರಳ ಸಂಖ್ಯೆಯಲ್ಲಿ ಭೂಮಿಯಲ್ಲಿ ಹರಡಿ ಬಿಡುವ ಒಂದೇ ಬಗೆಯ ಪ್ರಾಣಿಯಾಗಿರುವುದೋ ಎಂಬ ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಲಾಗಿಲ್ಲ. 'ದಾಬ್ಬತುಮ್ಮಿನಲ್ ಅರ್ದ್' (ಒಂದು ಪ್ರಾಣಿಯನ್ನು ನೆಲದಿಂದ ಹೊರತರುವೆವು) ಎಂಬ ಪದ ಪ್ರಯೋಗದಲ್ಲಿ ಎರಡೂ ಸಾಧ್ಯತೆಗಳಿಗೆ ಅವಕಾಶವಿದೆ. ಆ ಪ್ರಾಣಿಯು ಹೊರಡುವ ಕಾಲ ಯಾವುದು ಎಂಬ ಕುರಿತು ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ, "ಸೂರ್ಯ ಪಶ್ಚಿಮದಿಂದ ಉದಯಿಸುವುದು ಮತ್ತು ಒಂದು ದಿನ ಹಾಡುಹಗಲೇ ಈ ಪ್ರಾಣಿ ಹೊರಬರುವುದು" ಪ್ರಾಣಿಯು ಮಾನವರೊಡನೆ ಮಾನವರ ಭಾಷೆಯಲ್ಲಿ ಮಾತನಾಡುವುದು ದೇವಲೀಲೆಯಾಗಿದೆ. ಅವನು ಇಚ್ಛಿಸಿದರೆ ಯಾರಿಗೂ ವಾಕ್‌ಶಕ್ತಿಯನ್ನು ನೀಡಬಲ್ಲನು. ನಿರ್ಣಾಯಕ ದಿನಕ್ಕೆ ಮೊದಲು ಅವನು ಪ್ರಾಣಿಯೊಂದಕ್ಕೆ ಮಾತ್ರ ವಾಕ್‌ಶಕ್ತಿಯನ್ನು ದಯಪಾಲಿಸುವನು. ಆದರೆ ನಿರ್ಣಾಯಕ ದಿನ ಎದುರಾದಾಗ ಅಲ್ಲಾಹನ ನ್ಯಾಯಾಲಯದಲ್ಲಿ ಮಾನವರ ಕಣ್ಣು, ಕಿವಿ ಮತ್ತು ದೇಹದ ಚರ್ಮವೂ ಮಾತನಾಡಲಾರಂಭಿಸುವುದು. ಕುರ್‌ಆನಿನಲ್ಲಿ ಈ ಕುರಿತು ಸ್ಪಷ್ಟವಾಗಿ ವಿವರಿಸಲಾಗಿದೆ. (ಹಾಮ್ಮೀಮ್ ಅಸ್ಸಜ್‌ದಃ 20-21)

كُنْتُمْ تَعْمَلُونَ ﴿٨٤﴾

ಅವುಗಳನ್ನು ಗ್ರಹಿಸಿರಲಿಲ್ಲ. ಇದಲ್ಲವಾದರೆ ನೀವು ಇನ್ನೇನು ಮಾಡುತ್ತಿದ್ದಿರಿ?" ಎಂದು ಕೇಳುವನು.

وَوَقَعَ الْقَوْلُ عَلَيْهِمْ بِمَا ظَلَمُوا
فَهُمْ لَا يَنْطِقُونَ ﴿٨٥﴾

85. ಮತ್ತು ಅವರ ಅಕ್ರಮದ ಕಾರಣದಿಂದ ಅವರ ಮೇಲೆ ಯಾತನೆಯ ವಾಗ್ದಾನವು ಪೂರ್ತಿಗೊಳ್ಳುವುದು. ಆಗ ಅವರು ಏನನ್ನೂ ಹೇಳಲಾರರು.

أَلَمْ يَرَوْا أَنَّا جَعَلْنَا اللَّيْلَ لِيَسْكُنُوا
فِيهِ وَالنَّهَارَ مُبْصِرًا ۚ إِنَّ فِي ذَٰلِكَ
لَآيَاتٍ لِقَوْمٍ يُؤْمِنُونَ ﴿٨٦﴾

86. ನಾವು ರಾತ್ರಿಯನ್ನು ಅವರ ಪ್ರಶಾಂತಿಗಾಗಿಯೂ, ಹಗಲನ್ನು ಅವರಿಗೆ ಪ್ರಕಾಶಮಾನವಾಗಿಯೂ ಮಾಡಿರುವುದು ತೋಚುತ್ತಿರ ಲಿಲ್ಲವೇ? ಇದರಲ್ಲಿ ಸತ್ಯವಿಶ್ವಾಸವಿಟ್ಟವರಿಗೆ ಅನೇಕ ನಿದರ್ಶನ ಗಳಿದ್ದುವು.

وَيَوْمَ يُنْفَخُ فِي الصُّورِ فَفَزِعَ مَنْ
فِي السَّمَاوَاتِ وَمَنْ فِي الْأَرْضِ إِلَّا مَنْ
شَاءَ اللَّهُ ۚ وَكُلٌّ أَتَوْهُ دَاخِرِينَ ﴿٨٧﴾

87. ಸೂರ್ (ಕಹಳೆ) ಊದಲ್ಪಡುವ ಹಾಗೂ ಆಕಾಶಗಳಲ್ಲೂ ಭೂಮಿಯಲ್ಲೂ ಇರುವವುಗಳೆಲ್ಲವೂ ದಿಗಿಲುಗೊಳ್ಳುವ ಆ ದಿನ ಹೇಗಿರುವುದು? ಅಲ್ಲಾಹನು ಆ ದಿಗಿಲಿನಿಂದ ರಕ್ಷಿಸಲಿಚ್ಛಿಸುವವರ ಹೊರತು ಮಿಕ್ಕವರೆಲ್ಲರೂ ಕಿವಿಯೊತ್ತಿಕೊಂಡು ಅವನ ಸನ್ನಿಧಿ ಯಲ್ಲಿ ಹಾಜರಾಗುವರು.

وَتَرَى الْجِبَالَ تَحْسَبُهَا جَامِدَةً وَهِيَ
تَمُرُّ مَرَّ السَّحَابِ ۚ صُنْعَ اللَّهِ الَّذِي
أَتْقَنَ كُلَّ شَيْءٍ ۚ إِنَّهُ خَبِيرٌ بِمَا تَفْعَلُونَ ﴿٨٨﴾

88. ಇಂದು ನೀವು ಪರ್ವತಗಳನ್ನು ನೋಡುತ್ತೀರಿ ಮತ್ತು ಅವು ಚೆನ್ನಾಗಿ ನಾಟಿಕೊಂಡಿವೆಯೆಂದು ತಿಳಿಯುತ್ತೀರಿ. ಆದರೆ, ಅಂದು ಅವು ಮೋಡಗಳಂತೆ ಹಾರಾಡುತ್ತಿರುವುವು. ಇದು ಸಕಲವನ್ನೂ ಯುಕ್ತಿಯೊಂದಿಗೆ ಸುಭದ್ರಗೊಳಿಸಿರುವ ಅಲ್ಲಾಹನ ಮಹಿಮೆಯ ಅದ್ಭುತ ಕಾರ್ಯವಾಗಿರುವುದು. ನೀವೇನು ಮಾಡುತ್ತೀರೆಂಬುದನ್ನು ಅವನು ಚೆನ್ನಾಗಿ ಅರಿತಿರುತ್ತಾನೆ.

مَنْ جَاءَ بِالْحَسَنَةِ فَلَهُ خَيْرٌ مِنْهَا ۚ
وَهُمْ مِنْ فَزَعٍ يَوْمَئِذٍ آمِنُونَ ﴿٨٩﴾

89. ಒಳಿತಿನೊಂದಿಗೆ ಬಂದವನಿಗೆ ಅದಕ್ಕಿಂತ ಉತ್ತಮ ಪ್ರತಿಫಲ ಸಿಗುವುದು, ಇಂತಹವರು ಆ ದಿನದ ದಿಗಿಲಿನಿಂದ ಸುರಕ್ಷಿತ ರಾಗಿರುವರು.

وَمَنْ جَاءَ بِالسَّيِّئَةِ فَكُبَّتْ وُجُوهُهُمْ
فِي النَّارِ هَلْ تُجْزَوْنَ إِلَّا مَا
كُنْتُمْ تَعْمَلُونَ ﴿٩٠﴾

90. ಕೆಡುಕುಗಳೊಂದಿಗೆ ಬರುವವರೆಲ್ಲರೂ ಅಧೋಮುಖವಾಗಿ ನರಕಕ್ಕೆ ಎಸೆಯಲ್ಪಡುವರು. ಮಾಡಿದ್ದನ್ನುಣ್ಣುವ ಹೊರತು ನೀವು ಇನ್ನಾವುದಾದರೂ ಪ್ರತಿಫಲ ಪಡೆಯಬಲ್ಲಿರಾ?

إِنَّمَا أُمِرْتُ أَنْ أَعْبُدَ رَبَّ هَٰذِهِ الْبَلْدَةِ
الَّذِي حَرَّمَهَا وَلَهُ كُلُّ شَيْءٍ ۖ وَأُمِرْتُ

91-92. (ಪೈಗಂಬರರೇ), "ನನಗಂತು ಈ ನಗರದ (ಮಕ್ಕಾದ) ಪ್ರಭುವಿನ ಆರಾಧನೆ ಮಾಡಬೇಕೆಂದು ಅಪ್ಪಣೆ ಕೊಡಲಾಗಿದೆ. ಅವನು ಇದನ್ನು

أَنْ أَكُونَ مِنَ الْمُسْلِمِينَ ﴿٩١﴾
وَأَنْ أَتْلُوَا الْقُرْآنَ ۖ فَمَنِ اهْتَدَىٰ
فَإِنَّمَا يَهْتَدِي لِنَفْسِهِ ۖ وَمَن ضَلَّ
فَقُلْ إِنَّمَا أَنَا مِنَ الْمُنذِرِينَ ﴿٩٢﴾

'ಸನ್ಮಾನ್ಯ ಸ್ಥಳ' ಆಗಿ ಮಾಡಿರುತ್ತಾನೆ ಮತ್ತು ಅವನು ಸಕಲ ವಸ್ತುಗಳ ಒಡೆಯನಾಗಿದ್ದಾನೆ. ನಾನು ಮುಸ್ಲಿಮ(ಶರಣಾಗತ) ನಾಗಿರಬೇಕೆಂದೂ ಕುರ್‌ಆನನ್ನು ಓದಿ ಹೇಳಬೇಕೆಂದೂ ಆಜ್ಞಾಪಿಸಲ್ಪಟ್ಟಿದ್ದೇನೆ" (ಎಂದು ಹೇಳಿರಿ) ಇನ್ನು ಯಾರು ಸನ್ಮಾರ್ಗವನ್ನನುಸರಿಸುವನೋ ಅವನು ತನ್ನ ಹಿತಕ್ಕಾಗಿಯೇ ಸನ್ಮಾರ್ಗವನ್ನನುಸರಿಸುವನು ಮತ್ತು ಯಾರು ಪಥಭ್ರಷ್ಟನಾಗುವನೋ ಅವನೊಡನೆ, "ನಾನು ಎಚ್ಚರಿಕೆ ನೀಡುವವನು ಮಾತ್ರ" ಎಂದು ಹೇಳಿ ಬಿಡಿರಿ.

وَقُلِ الْحَمْدُ لِلَّهِ سَيُرِيكُمْ آيَاتِهِ
فَتَعْرِفُونَهَا ۚ وَمَا رَبُّكَ بِغَافِلٍ
عَمَّا تَعْمَلُونَ ﴿٩٣﴾

93. ಸಕಲ ಸ್ತೋತ್ರಗಳೂ ಅಲ್ಲಾಹನಿಗೆ. ಅವನು ಸದ್ಯವೇ ತನ್ನ ನಿದರ್ಶನಗಳನ್ನು ನಿಮಗೆ ತೋರಿಸಿ ಕೊಡುವನು ಮತ್ತು ನೀವು ಅವುಗಳನ್ನು ಗುರುತಿಸಿಕೊಳ್ಳುವಿರಿ. ನಿಮ್ಮ ಪ್ರಭು ನೀವು ಮಾಡುತ್ತಿರುವ ಕರ್ಮಗಳ ಬಗ್ಗೆ ಬೋಧರಹಿತನಲ್ಲವೆಂದೂ ಅವರೊಡನೆ ಹೇಳಿರಿ.